# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.117/2023</u>

<u>ಸಾಕ್ಷಿದಾರರ ಹೇಳಿಕೆಃ</u>

| | | | |
|---|---|---|---|
| **ಹೆಸರು** | : ರಾಕೇಶ | ಚಾಸಾಃ **1** | ಪ್ರಾಸಾಃ **1** |
| **ತಂದೆಯ ಹೆಸರು** | : ನರಸಿಂಹಪ್ಪ | | |
| **ವಯಸ್ಸು** | : **26** ವರ್ಷ | | |
| **ವೃತ್ತಿ** | : ವ್ಯವಸಾಯ | | |
| **ವಾಸಸ್ಥಳ** | : ಹುರಳೇಹಳ್ಳಿ ಗ್ರಾಮ | | |

ದಿನಾಂಕಃ **23-09-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

1, 3 ರಿಂದ 6 ಆರೋಪಿತರು ಗೊತ್ತು. ಚಾಸಾ-4 ನನ್ನ ತಾಯಿ. ಚಾಸಾ-5 ನನ್ನ ತಂದೆ. ಚಾಸಾ-2 ಮತ್ತು 3 ಗೊತ್ತು. ದಿಃ 25-03-2022 ರಂದು ಬೆಳಗ್ಗೆ 10-00 ಗಂಟೆ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಚಾಸಾ-4 ರವರು 1 ನೇ ಆರೋಪಿಯ ಹತ್ತಿರ ನಮ್ಮ ಜಮೀನಿಗೆ ಯಾಕೆ ನೀರು ಬಿಟ್ಟಿದ್ದೀಯಾ ಎಂದು ಕೇಳಿದಾಗ ಆ ಸಮಯದಲ್ಲಿ ನಾಗರಾಜ, ಗಣೇಶ, ಶಿವರಾಜು, ಶೇಷಮ್ಮ, ಚಂದ್ರಪ್ಪ, ನರಸಿಂಹಪ್ಪ, ರೇಣುಕಾ, ಸಚಿನ್, ರಮೇಶ್ ಮತ್ತು ಪ್ರೇಮಾ ರವರು ನಮ್ಮ ಮನೆಯ ಹತ್ತಿರ ಬಂದು ನನ್ನನ್ನು ಕೈ ಯಿಂದ ತಳ್ಳಿದರು, ಚಾಸಾ-4 ರವರ ಬಲಗೈ ಯನ್ನು ತಿರುವಿ ನೆಲಕ್ಕೆ ತಳ್ಳಿದ್ದು ಆ ಸಮಯದಲ್ಲಿ ಚಾಸಾ-4 ರವರಿಗೆ ಮೂಗು ಮತ್ತು ಬಾಯಿಯಲ್ಲಿ ರಕ್ತ ಬಂದಿದ್ದು ಮತ್ತು ಕೈ ದಪ್ಪವಾಗಿರುತ್ತದೆ. ಚಾಸಾ-5 ರವರನ್ನು ಗಣೇಶನು ಎತ್ತಿ ಬಿಸಾಕಿರುತ್ತಾರೆ ಮತ್ತು ಕೆಟ್ಟ ಪದಗಳಿಂದ ಬೈದಿರುತ್ತಾರೆ. ಚಾಸಾ-4 ರವರಿಗೆ ದೊಣ್ಣೆಯಿಂದ ಬೆನ್ನಿಗೆ ಮತ್ತು ಕೈ ಕಾಲಿಗೆ ನಾಗರಾಜ ಮತ್ತು ರಮೇಶರವರು ಹೊಡೆದಿರುತ್ತಾರೆ. ನಂತರ ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-4 ರವರು ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ತದನಂತರ ನಾನು ಹೊನ್ನಾಳಿ ಪೊಲೀಸ್ ಠಾಣೆಗೆ ಹೋಗಿ

ಪೊಲೀಸರಿಗೆ ದೂರನ್ನು ಕೊಡಲು ಹೋಗಿದ್ದು ಪೊಲೀಸರು ದೂರನ್ನು ಸ್ವೀಕರಿಸಲು ನಿರಾಕರಿಸಿದರು, ತದನಂತರ ನಾನು ದಾವಣಗೆರೆ ಎಸ್ ಪಿ ಕಚೇರಿಗೆ ಹೋಗಿ ದೂರನ್ನು ಸಲ್ಲಿಸಿದ ನಂತರ ಪೊಲೀಸರು ಪ್ರಕರಣವನ್ನು ದಾಖಲು ಮಾಡಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದಿರುವ ನಾಗರಾಜ, ಗಣೇಶ, ಶೇಷಮ್ಮ, ಶಿವರಾಜ್ ಮತ್ತು ರಮೇಶರವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಪ್ರೇಮಾ, ರೇಣುಕಮ್ಮ, ಸಚಿನ್ ಮತ್ತು ನರಸಿಂಹಪ್ಪ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ.

ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೊಣ್ಣೆಯನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-

ಮೇಲ್ಕಂಡ 10 ಜನರು ಚಾಸಾ-4 ರವರ ಕೂದಲನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟು ಮಾಡಿರುತ್ತಾರೆ ಎಂದರೆ ಸರಿ. ನನಗೂ ಮತ್ತು ಚಾಸಾ-4 ರವರಿಗೆ ಮೇಲ್ಕಂಡ 10 ಜನ ಆರೋಪಿತರು ಪ್ರಾಣ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ-2 ಮತ್ತು 3 ರವರು ಜಗಳವನ್ನು ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಗಲಾಟೆಯ ವಿಚಾರ ತಿಳಿದು ಚಾಸಾ-5 ರವರು ಸ್ಥಳಕ್ಕೆ ಬಂದ ನಂತರ ಚಾಸಾ-4 ರವರನ್ನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಚಾಸಾ-4 ರವರ ಸೀರೆ ಮತ್ತು ರವಿಕೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.2 ಮತ್ತು 3 ಎಂದು ಗುರುತಿಸಲಾಯಿತು. 1 ರಿಂದ 6 ಆರೋಪಿತರು ಮಾತ್ರ ಗಲಾಟೆ ಮಾಡಿರುತ್ತಾರೆ ಪ್ರೇಮಾ, ನರಸಿಂಹಪ್ಪ, ರೇಣುಕಮ್ಮ, ಸಚಿನ್ ರವರು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದು ಪೊಲೀಸರಿಗೆ ಮರುಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ನಿಪಿ-2 ಎಂದು, ನಿಪಿ-2 ರಲ್ಲಿ 1. ನಾಗರಾಜ್........ ಗಲಾಟೆ ಮಾಡಿರುವುದಿಲ್ಲ ಎಂದು ಮರಹೇಳಿಕೆಯ ಭಾಗವನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿತರ ಪರ ವಕೀಲರಿಂದಃ

ನಿಪಿ-1 ದೂರನ್ನು ನಾನೇ ಬೆರಳಚ್ಚು ಮಾಡಿಸಿಕೊಂಡು ಪೊಲೀಸರಿಗೆ ಕೊಟ್ಟಿರುತ್ತೇನೆ. ನಿಪಿ-1 ರಲ್ಲಿ ದೂರನ್ನು ದಿಃ 04-06-2022 ರಂದು ಕೊಟ್ಟಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಗಲಾಟೆ ನಡೆದ ದಿನದಂದೇ ಪೊಲೀಸರಿಗೆ ದೂರು ಕೊಡಲು ಹೋಗಿರುತ್ತೇನೆ ಆದರೆ ಪೊಲೀಸರು ದೂರನ್ನು ತೆಗೆದುಕೊಂಡಿರುವುದಿಲ್ಲ, ತದನಂತರ ದಾವಣಗೆರೆ ಎಸ್ ಪಿ ರವರ ಆದೇಶದ ನಂತರ ದೂರನ್ನು ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ದಾವಣಗೆರೆ ಎಸ್ ಪಿ ರವರಿಗೆ ದೂರನ್ನು ಸಲ್ಲಿಸಿರುವ ಬಗ್ಗೆ ನಮೂದಾಗಿರುವುದಿಲ್ಲ. ನಿಪಿ-1 ರಲ್ಲಿ ನಮೂದಾಗಿರುವ ವಿಚಾರಗಳು ನಿಮಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಓದು ಬರಹ ಬರುವುದಿಲ್ಲ ಆದರೆ ನಾನೇ ಹೇಳಿ ಬೆರಳಚ್ಚು ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯು ಸರ್ವೇ ನಂ.31/1 ರ ಜಮೀನಿಗೆ ನೀರು ಹಾಯಿಸಿರುತ್ತಾರೆ. ಆರೋಪಿತರು ನನಗೆ ಸಂಬಂಧದಲ್ಲಿ ಅಣ್ಣ ತಮ್ಮಂದಿರು ಆಗಬೇಕು ಎಂದರೆ ಸರಿ. ನಮ್ಮ ಕುಟುಂಬದ ನಡುವೆ ಮತ್ತು ಆರೋಪಿತರ ಕುಟುಂಬದ ನಡುವೆ ಸರ್ವೇ ನಂ,41/1 ಮತ್ತು 31/1 ರ ಜಮೀನಿಗೆ ಸಂಬಂಧಪಟ್ಟಂತೆ ಇಬ್ಬರ ನಡುವೆ ತಕರಾರು ಇದೆ ಎಂದರೆ ಸರಿ. ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪೊಲೀಸರಿಗೆ ನಿಪಿ-1 ದೂರನ್ನು ಕೊಟ್ಟಿರುತ್ತೇನೆ ವಿನಃ ಆರೋಪಿತರು ನಮಗೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ನಾಗರಾಜ, ಗಣೇಶ, ಶೇಷಮ್ಮ ಮತ್ತು ಶಿವರಾಜರವರ ಮನೆ ಸುಮಾರು 100 ಮೀ. ಅಂತರದಲ್ಲಿರುತ್ತದೆ. ರಮೇಶ ರವರ ಮನೆ ನಮ್ಮ ಮನೆಯಿಂದ ಸುಮಾರು 60 ಮೀ ಅಂತರದಲ್ಲಿರುತ್ತದೆ. ಸರ್ವೇ ನಂ.31/1 ಶೇಷಮ್ಮರವರು ಖರೀದಿ ಮಾಡಿದ ಜಮೀನು ಎಂದರೆ ಸರಿಯಲ್ಲ. ಶೇಷಮ್ಮ ಮತ್ತು ಚಂದ್ರಪ್ಪರಮರ ಸರ್ವೇ ನಂ.31/1 ರಲ್ಲಿ 1 ಎಕರೆ 14.8 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯು ಅವರ ಹೆಸರಿನಲ್ಲಿರುತ್ತದೆ ಆದರೆ ಸಾಗುವಳಿಯನ್ನು ಯಾರು ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 207/2022 ರಲ್ಲಿ ಈ ನ್ಯಾಯಾಲಯದಿಂದ ಶೇಷಮ್ಮ ಮತ್ತು ಚಂದ್ರಪ್ಪರವರು ನನ್ನ ತಂದೆ, ತಾಯಿ,ನನ್ನ ಮತ್ತು ನನ್ನ ತಮ್ಮನಾದ ಹರೀಶರ ವಿರುದ್ಧ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ನೋಟೀಸ್ ಬಂದಾಗ ನಾವು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾವು ಉದ್ದೇಶ ಪೂರ್ವಕವಾಗಿ ನೋಟೀಸನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾವು

ಉದ್ದೇಶಪೂರ್ವಕವಾಗಿ ಹಾಜರಾಗದಿದ್ದ ಕಾರಣ ಸದರಿ ದಾವೆಯು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಮು.ಮಾ.1 ದೊಣ್ಣೆ ನಮಗೆ ಸೇರಿದ್ದು ಎಂದರೆ ಸರಿಯಲ್ಲ. ಪೊಲೀಸರು ಮು.ಮಾ.1 ದೊಣ್ಣೆಯನ್ನು ನಮ್ಮ ಮನೆಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ.1 ದೊಣ್ಣೆ ನಮಗೆ ಸೇರಿದ್ದು ಅದನ್ನು ಈ ಪ್ರಕರಣಕ್ಕೋಸ್ಕರ ನಾನೇ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಆಸ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ತಕರಾರು ಇದ್ದು ಮತ್ತು ಸದರಿ ತಕರಾರುಗಳನ್ನು ಬಗೆಹರಿಸುವ ಸಲುವಾಗಿ ಆರೋಪಿತರು ನಮಗೆ ಯಾವುದೇ ಹಲ್ಲೆ ಮಾಡದಿದ್ದರೂ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮನೆಯ ಹತ್ತಿರ ಚಾಸಾ-4 ರವರು 1 ನೇ ಆರೋಪಿಯ ಹತ್ತಿರ ನಮ್ಮ ಜಮೀನಿಗೆ ಯಾಕೆ ನೀರು ಬಿಟ್ಟಿದ್ದೀಯಾ ಎಂದು ಕೇಳಿದಾಗ ಆ ಸಮಯದಲ್ಲಿ ನಾಗರಾಜ, ಗಣೇಶ, ಶಿವರಾಜು, ಶೇಷಮ್ಮ, ಚಂದ್ರಪ್ಪ, ನರಸಿಂಹಪ್ಪ, ರೇಣುಕಾ, ಸಚಿನ್, ರಮೇಶ್ ಮತ್ತು ಪ್ರೇಮಾ ರವರು ನಮ್ಮ ಮನೆಯ ಹತ್ತಿರ ಬಂದು ನನ್ನನ್ನು ಕೈ ಯಿಂದ ತಳ್ಳಿಲ್ಲ ಮತ್ತು ಚಾಸಾ-4 ರವರ ಬಲಗೈ ಯನ್ನು ತಿರುವಿಲ್ಲ ಮತ್ತು ನೆಲಕ್ಕೆ ತಳ್ಳಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಮೂಗು ಮತ್ತು ಬಾಯಿಯಲ್ಲಿ ರಕ್ತ ಬಂದಿಲ್ಲ ಮತ್ತು ಕೈ ದಪ್ಪವಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-5 ರವರನ್ನು ಗಣೇಶನು ಎತ್ತಿ ಬಿಸಾಕಿಲ್ಲ ಮತ್ತು ಕೆಟ್ಟ ಪದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ದೊಣ್ಣೆಯಿಂದ ಬೆನ್ನಿಗೆ ಮತ್ತು ಕೈ ಕಾಲಿಗೆ ನಾಗರಾಜ ಮತ್ತು ರಮೇಶರವರು ಹೊಡೆದಿಲ್ಲ ಎಂದರೆ ಸರಿಯಲ್ಲ. ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-4 ರವರು ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಅಂಗವಿಕಲನಾಗಿದ್ದರಿಂದ ಆರೋಪಿತರಿಗೆ ನನ್ನ ಮೇಲೆ ಅನುಕಂಪ ಇದೆಯೇ ಹೊರತು ಯಾವುದೇ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.